ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 84-93
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಇತ್ತೀಚಿನ ಕನ್ನಡ ಕಾವ್ಯಗಳಲ್ಲಿ ವರ್ತಮಾನದ ಪ್ರತಿಸ್ಪಂದನೆಗಳು

**ಡಾ. ರೆಹಮಾನ ಆಯ್. ಗೊರಜನಾಳ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

**Abstract:**

*ಹೊಸಗನ್ನಡ ಕಾವ್ಯಗಳಲ್ಲಿ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ, ಕಾಲಘಟ್ಟಗಳಲ್ಲಿ ಆಯಾ ಕಾಲಕ್ಕೆ ತಕ್ಕಂತೆ ವಿಶೇಷತೆಯೊಂದಿಗೆ ಕವನಗಳು ರಚನೆಯಾಗಿವೆ. ಸೃಜನಶೀಲತೆ, ಪರಿಕಲ್ಪನೆ, ಕಾವ್ಯರಚನೆ, ವಾಸ್ತವತೆ, ವ್ಯಾಪಕತೆಯನ್ನು ಸಾಹಿತ್ಯದಲ್ಲಿ ಸೆರೆಹಿಡಿಯಲಾಗಿರುತ್ತದೆ. ಕವಿ, ಕಾವ್ಯ, ಸಹೃದಯ, ತ್ರಿಕೋನ ಆಕಾರದಲ್ಲಿ ವೈಚಾರಿಕತೆ ಅರ್ಥವನ್ನು ತಿಳಿಯಲು ಪ್ರಯತ್ನಸುವುದಾಗಿದೆ. ಆದರೆ ಕವಿಯ ಕಲ್ಪನೆ, ಊಹೆ, ಮನಸ್ಸು, ರಚನೆಯ ಶೈಲಿ, ವರ್ತಮಾನದ ಪ್ರತಿಸ್ಪಂದನೆ, ಟೀಕೆಗಳು, ಸಮಾನತೆ ಮುಂತಾದ ವಿಷಯಗಳಿಂದ ಸಾಹಿತ್ಯ ರಚನೆಯಾಗಿರುತ್ತದೆ. ಪ್ರೀತಿ, ಪ್ರೇಮ, ಪ್ರಣಯ, ಪ್ರಕೃತಿ ಸೌಂದರ್ಯ, ಸಂಬಂಧಗಳು ಭಯ, ಮಾತು, ದಾರಿದೀಪ, ಹಸಿವು, ಕನಸುಗಳು, ಅವಕಾಶಗಳು, ಜ್ಞಾನ, ರುಚಿ ಮುಂತಾದ ಹತ್ತು ಹಲವಾರು ವಿಷಯಗಳನ್ನು ವೈವಿಧ್ಯತೆಯ ವಿವಿಧ ಆಯಾಮಗಳಲ್ಲಿ ಓದುಗರಿಗೆ ತಲುಪಬೇಕೆಂದರೆ ಅಧ್ಯಯನ ಮಾಡುವುದರಿಂದ ಅದರ ಒಳಾರ್ಥವು ನಮಗೆ ತಿಳಿಯುತ್ತದೆ.*

**Keywords:** *ಸೃಜನಶೀಲತೆ, ವೈಚಾರಿಕತೆ, ವಾಸ್ತವಿಕತೆ, ಕಾಲಘಟ್ಟ, ವರ್ತಮಾನ, ಪ್ರತಿಸ್ಪಂದನೆ, ಪರಿಕಲ್ಪನೆ, ಕಾವ್ಯ, ಪ್ರಕೃತಿ, ಅವಕಾಶ ಇತ್ಯಾದಿ.*

### ಪೀಠಿಕೆ

ಕನ್ನಡ ಕಾವ್ಯಗಳಲ್ಲಿ ವರ್ತಮಾನದ ಪ್ರತಿಸ್ಪಂದನೆಯನ್ನು ಇತ್ತೀಚಿನ ಕಾವ್ಯಗಳಲ್ಲಿ ನಾವು ನೋಡಬಹುದಾಗಿದೆ. ಏಕೆಂದರೆ ಕಾವ್ಯಗಳ ರಚನೆಯ ಮೇಲೆ ಆಧುನಿಕತೆಯ ಪ್ರಭಾವ, ಪ್ರೇರಣೆ, ಧೋರಣೆಗಳು, ಪಾಶ್ಚಾತ್ಯ ಸಾಹಿತ್ಯದ ಗಾಢವಾದ ಪ್ರಭಾವವು ಕಂಡುಬರುತ್ತದೆ. ಕವಿ ಸಮಯವು ಸುಪ್ತವಾಗಿರುವ ಭಾವನೆಗಳೊಂದಿಗೆ ತಮಗೆ ಬಂದಂತಹ ವಿಚಾರಗಳನ್ನು ಚಿಂತನೆಗಳಿಗೆ ಒಳಪಡಿಸಿ, ಅದಕ್ಕೆ ಒಂದು ರೂಪವನ್ನು ಕೊಟ್ಟು ಕವಿ ಕಾವ್ಯವನ್ನು ರಚಿಸುತ್ತಾನೆ. ಇದು ಪ್ರಾಚೀನ ಕಾಲದಿಂದ ಇಂದಿನವರೆಗೂ ಸಾಗಿಬಂದಿದೆ. ಕೊನೆಗೆ ಕೃತಿಯಾಗಿ ಲೋಕಾರ್ಪಣೆಯಾದಾಗ ಕವಿಯ ಪರಿಶ್ರಮವು ಲೋಕಕ್ಕೆ ತಿಳಿಯುತ್ತದೆ. ಇದರಿಂದ ಗೌರವ ಸನ್ಮಾನಗಳು ದೊರೆತು ಮತ್ತೆ ಹೆಚ್ಚು ಜವಾಬ್ದಾರಿಯುತರಾಗಿ ಸಾಹಿತ್ಯ ಕೃಷಿಗೆ ತೊಡಗಿಕೊಳ್ಳುತ್ತಾರೆ. ಆದ್ದರಿಂದ ಇತ್ತೀಚಿನ ಹೊಸ ಕಾವ್ಯಗಳು ವರ್ತಮಾನದ ವಿವಿಧ ನೆಲೆಗಳಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಅಧ್ಯಯನದ ಮುಖಾಂತರ ಅರಿಯಲು ಪ್ರಯತ್ನಿಸುವುದಾಗಿ ಇದು ಹೀಗೆ ಕಂಡುಬರುತ್ತದೆ.

**Please cite this article as:** ರೆಹಮಾನ ಆಯ್. ಗೊರಜನಾಳ. (2025). ಇತ್ತೀಚಿನ ಕನ್ನಡ ಕಾವ್ಯಗಳಲ್ಲಿ ವರ್ತಮಾನದ ಪ್ರತಿಸ್ಪಂದನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(1), 84–93

**ಸಮಯದ ವಾಸ್ತವತೆಯೊಂದಿಗೆ ಸಂಬಂಧಗಳು**

**ವಾಸ್ತವ – ಜಯಪ್ರಕಾಶ ಜಿ :** ಬಳ್ಳಿಯಂತ ಕೇಶ, ಗುಲಾಬಿ ಎಳೆಯಂತ ತುಟಿ. ಎತ್ತರಕ್ಕೆ ತಕ್ಕಂತೆ ಸಹಜ ಮೈ ಮಾಟವು ಮುಗ್ಧತೆಯ ಮುಖವು ಕಣ್ಣಿನಲ್ಲಿ ಕೊಲ್ಲುವ ನೋಟವು ನೇರ ನಡೆ ನುಡಿಯ ವ್ಯಕ್ತಿತ್ವವಾಗಿದೆ. ಅವಳು ಬಯಸಿದಳು ಎನ್ನ ಮನವು ಸ್ನೇಹದಿಂದ ಬೆಳೆಯಲು ಸಂತಸ ತಂದಿದೆ. ಜನರು ಬಾಹ್ಯ ಸೌಂದರ್ಯ ಮೆಚ್ಚುವರು. ಆದರೆ ಅವಳ ಕಣ್ಣುಗಳನ್ನು ಕಂಡು ಬೆಚ್ಚಿದರು. ಅವಳ ಪ್ರೀತಿಯ ನಗು ಎಲ್ಲರ ಪರಿಚಯದ ಆತ್ಮೀಯತೆ ಮಾಡುವಳು. ಬಡವರ ಪ್ರೀತಿಗೆ ಪಾತ್ರಳು ಆಗಿರುವಳು.

**ಸಂಬಂಧ:** ಅನುಮಾನ–ಅವಮಾನ ಕೋಟೆಯ ಸುತ್ತಮುತ್ತ ನಂಬಿಕೆ ಎಂಬ ಕಂಬದಿಂದ ಸಂಬಂಧದ ಸೌಧ ನಿರ್ಮಾಣವಾಗಿದೆ. ಸುಖ ಸಂತೋಷದ ಜೀವನಕ್ಕಾಗಿ ಹಲವಾರು ಕಟ್ಟುಪಾಡು ಹೊಣೆಗಾರಿಕೆ, ಕರ್ತವ್ಯ ಜವಾಬ್ದಾರಿಗಳಿಂದ ಬೆಲೆ ತೆರಬೇಕಾದಿತ್ತು. ಈ ಲೋಕದಲ್ಲಿ ಪೀತಿ, ವಿಶ್ವಾಸದಿಂದ ಸಂಬಂಧದ ಗೂಡು ಕಟ್ಟಬೇಕು. ಸಂಬಂಧಗಳಲ್ಲಿ ತಾರತಮ್ಯ ಆಳ್ತನ, ಸುಳ್ಳುಗಳನ್ನು ಕಟ್ಟಲು ಹೊರಟರೆ ಉಸಿರು ಗಟ್ಟಿಸುವ ಬಂಧನವಾಗುತ್ತದೆ. ಸ್ನೇಹ, ಪ್ರೀತಿ, ತ್ಯಾಗಮಯ ಬದುಕಿಗೊಂದು ಇರಲಿ. ಅವಳು ತನ್ನಂತೆಯೇ ಸಮಾನಳು, ಸಮಾನತೆಯಿಂದ ಇರುವವಳು ಎಂಬ ರೀತಿಯನ್ನು ಅರಿಯಬೇಕು. ಸ್ವತಂತ್ರದ ನಾಡಿನಲ್ಲಿ ನಿರಾಳವಾಗಿ ಬದುಕಲು ಬಿಡಿ. ಭಾವನೆಗಳಿಗೆ ಬೀಗ ಹಾಕಿ. ಆಳುವವರು ಇನ್ಯಾರೋ ಬಾವಿಗೆ ಬೇಲಿ ಇಲ್ಲ. ದಿಕ್ಕಿಗೆ ಕೊನೆಯಿಲ್ಲ. ಬಡತನದ ಬೇಗೆ ಇಳಿದು ನಗಲು ಸ್ನೇಹ ಸಂಬಂಧ ಬದುಕಿನಲ್ಲಿ ಸದಾ ಇರುತ್ತವೆ.

“ನಿಷ್ಠೆಯ ಕೆಲಸಗಾರ ನೀನು. ಸತ್ಯಕ್ಕೆ ಹೆಸರುಗಾರ ನೀನು. ಸಮಾನತೆಯ ಸರದಾರ ನೀನು. ಸೌಜನ್ಯದ ಹರಿಕಾರ ನೀನು. ಲೋಕವ ನಡೆಸುವೆ ನೀನು, ಲೋಕವ ಏಳಿಸುವೆ ನೀನು. ಲೋಕವ ಮಲಗಿಸುವೆ ನೀನು, ನೀನೇ ಮಲಗಲಾರೆ ಏಕೆ? ಮದುವೆಗೆ ಮುಂಜಿಗೆ ನೀನೇ ಸರಿ. ಜನನಕೆ ಮರಣಕೇ ನೀನೇ ಸರಿ. ಬೆಳಗಿಗೆ ಇರುಳಿಗೆ ನೀನೇ ಸರಿ. ನಿನ್ನಲಿ ಗಂಡು ಹೆಣ್ಣಿನ ಭೇದವೇ ಇಲ್ಲ. ಬಡವ ಬಲ್ಲಿದನೆಂಬ ಮಾತೇ ಇಲ್ಲ. ಹಗಲು ರಾತ್ರಿಗಳ ವಿಶ್ರಾಂತಿಯೇ ಇಲ್ಲ. ನಿನ್ನ ದುಡಿಮೆಗೆ ಬಿಡುವೇ ಇಲ್ಲ. ಶ್ರಮದ ಪಾಠವ ಹೇಳುವೆ ನೀನು. ಸಮಯದ ಬೆಲೆಯನು ತಿಳಿಸುವೆ ನೀನು. ನಿನ್ನರಿತವರಿಗೆ ಸೋಲೇ ಇಲ್ಲ. ನೀ ನನ್ನೊಡನಿದ್ದರೆ ಧೈರ್ಯವೆ ಇಲ್ಲ. ನಿನ್ನನು ಅರಿತರೆ ಬದುಕೇ ಚಂದ. ನಿನ್ನೊಡನೆನಗೆ ಸ್ನೇಹವೆ ಚಂದ. ನನಗೂ ನಿನಗೂ ಅನುಬಂಧ ನಿನ್ನೊಲುಮೆಯೇ ಚಂದ ಚಂದ ‘ಗಡಿಯಾರ’ ಕವನ. ಶಶಿಕಲಾ ಮನೋಹರ ರಚಿಸಿದ್ದಾಗಿದೆ.”[1] ಹೀಗೆ ಗಡಿಯಾರದ ಮಹತ್ವವನ್ನು ಈ ಕವನದಲ್ಲಿ ಕಾಣಬಹುದಾಗಿದೆ.

**ಭೂಮಾತೆಯ ಮಡಿಲಲ್ಲಿ:**

**ನಾವು ಗಲ್ಲಿಯವರು – ಎಮ್. ಕೆ. ಶೇಖ್ (ಮೌ.ಕು.ಶೇ.):** ಗಾಢವಾದ ಕತ್ತಲೆಯಲ್ಲಿ ಮಂದ ಬೆಳಕಿನಲಿ ಹಸಿದ ದುಂಬಿಗಳಿಗೆ ಹಳಸಿದ ಹೂಗಳು ನಾವಾಗಿದ್ದೇವೆ. ಇಲ್ಲಿ ಬಂದು ಹೋಗುತ್ತವೆ. ದಿನದಲ್ಲಿ ನೂರಾರು ಕತ್ತೆಗಳು, ನಾವು ಅವುಗಳಿಗೆ ಹಸಿರು ಗದ್ದೆಗಳು ಆಗಿದ್ದೇವೆ. ದಿನವೆಲ್ಲ ನೋವುಂಡು ನರಳಾಡುತ್ತಿರುವೆವು. ಇರುಳೆಲ್ಲ ದುಡ್ಡೆಣಿಸಿ ಬೆಳಗಾದರೆ ಚಟ ಏರುವ ಚಿಟ್ಟೆಗಳು ನಾವು ನಮ್ಮದು ಹುಳುಹೋದ ಶೀಲವಂತರಾಗಿದ್ದೇವೆ. ನಾವು ಮಾಡೆದೆಲ್ಲ ಅಶ್ಲೀಲ ಎಂದು ಟೀಕಿಸುವರು. ಈ ಲೋಕಕ್ಕೆ ನಾವು ಬಂದಿದ್ದೆ ಲಂಗು ಲಗಾಮು ಇಲ್ಲದೆ. ನಾವು ಮಾಡಿದ್ದೇ ನೀತಿ, ನಿಯಮವಿಲ್ಲದೆ ಆಗಿದೆ. ಆದರೆ ಇದು ನಮ್ಮ ತಪ್ಪಲ್ಲ. ಇದು ನಮ್ಮ ಪರಿಸ್ಥಿತಿಯ ಕಾಣಿಕೆಯಾಗಿದೆ. ಅಣ್ಣಂದಿರಿರಾ ಎಂದು ಗಲ್ಲಿಯವರು ತಿಳಿಸುವರು. ಆದ್ದರಿಂದ ನೀವು ಪ್ರತಿಭಟಿಸುವಿರಾ ಈ ವಾಡಿಕೆ? ಎಂಬ ಪ್ರಶ್ನೆಯು ಇದೆ. ಹೀಗೆ ಕವಿ ಎಮ್. ಕೆ. ಶೇಖ್ (ಮೌ.ಕು.ಶೇ) ಅವರ ಗಲ್ಲಿಯವರ ಸಮಸ್ಯೆಗಳು, ಪರಿಹಾರಗಳನ್ನು ಕುರಿತು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

**ಕೂಡಿ ಬಾಳೋಣ:** ಲೋಕದಲ್ಲಿ ಏನೆಲ್ಲ ಚಿತ್ರ–ವಿಚಿತ್ರ ಅವಾಂತರಗಳಿವೆ ಎನ್ನುವುದನ್ನು

ಕಾಣಬಹುದಾಗಿದೆ. ಮೇಣದ ಏಣಿಯನ್ನು ಏರಿ ಸೂರ್ಯನನ್ನು ಕಡಿಯ ಹೊರಟವರು. ತಾವು ಎಲ್ಲಿ ನಿಂತಿರುವವರು ಎಂಬ ಪ್ರಜ್ಞೆಯಿಲ್ಲದವರು. ಹೊಂಗೆಯ ಮರದಡಿಯ ಹುಲ್ಲು ಗುಡಿಸಲಲ್ಲಿ ಇದ್ದು ಸಹಸ್ರ ಶಾಶ್ವತ ಬೆಂಕಿಯೆತ್ತಿ ಚಂದ್ರನನ್ನೇ ಸುಡಲು ಹೊರಟವರು. ತಮ್ಮ ಪಾಡು ಏನಾದಿತ್ತು ಎಂಬ ಸ್ಥಿತಿಗತಿ ಅರಿವಿಲ್ಲದವರು. ತಗ್ಗದ ಹಗ್ಗ ಕಟ್ಟಿ ಬಗ್ಗದ ನುಗ್ಗೆಯ ಮರಕ್ಕೆ ಭೂಮಿಯನ್ನೇ ಸುತ್ತಿಸೆ ಹೊರಟವರು. ಶಕ್ತಿ ತನ್ನದೆ ಎಂದು ಮುಕ್ತವಾಗಿ ಮರಣ ಹಂಚುವ ಮುಕ್ತ ಕಿಂಕರಭಕ್ತರು, ಭಕ್ತಿ, ಶಾಂತಿ, ಬಾಂಧವ್ಯ, ಸಾಮರಸ್ಯಕ್ಕೆ ಕುಂದು ತಂದು ಸಮರ ಮಂಚ ಮಾಡುವವರು ಹೀನ ಕೃತ್ಯಗಳನ್ನು ಬಿಟ್ಟುಬಿಡಿ. ಪ್ರೀತಿ, ಸಹಬಾಳ್ವೆ, ಈ ಭೂಮಿಯಲ್ಲಿ ನೆಲೆಸಿರುವೆವು ಇವರ ಋಣದಲ್ಲಿ ಇರುವೆವು. ಕೂಡಿ ಬಾಳೋಣವೆಂದು ಇಂದೆ ತೊಡೋಣ ಪಣ ಎಂದು ಕವಿಯು ಶಾಂತಿಯ ನೆಲೆ ಭಾರತದೇಶದ ಬಾಂಧವರೆಲ್ಲಿ ವಿನಂತಿಸಿಕೊಳ್ಳುವರು.

**ಸೊಳ್ಳೆಗಳು:** ಸಿಳ್ಳೆ ಹೊಡೆಯುತ ಸುಳಿಯುವ ಸೊಳ್ಳೆಗಳೆ ಕಳ್ಳಗುಣದ ಗುಳ್ಳೆನರಿಯಂತೆ ನರ(ಕ) ಪಿಳ್ಳೆಗಳೆ. ರಕ್ತಬೀಜಾಸುರನ ವಂಶದ, ರಕ್ತ ಪಿಶಾಚಕಗಳೆ, ಕೊಳಚೆಗೇರಿಯ ಅಂದು ಇಂದಿನ ನಿವಾಸಕಗಳೆ, ನೆತ್ತರದ ಊಟ ಉಂಡು ಎತ್ತರದ ಎತ್ತರ ರೋಗವ ಜಾಹಿರಾತಿಲ್ಲದೆ ಹರಾಜು ಹಾಕುವ ಕುತಂತ್ರದ ಕುಹಕಗಳೆ, ನೊಣದ ಆದಿಯು ನೀವು, ನರಕ ದರ್ಶಕರು ನೀವು. ಸೊಕ್ಕಿನ ಮೈಯೋಳು ಉಕ್ಕಿನ ಸೂಜಿಯ, ಕುಕ್ಕಿ ರಕ್ತ ಹೀರುವವರು ನೀವು. ಸಾರ್ವಜನಿಕರಲ್ಲಿ ಸಾರ್ವತ್ರಿಕರು ನೀವು ಬೇಟೆಯಾಡುವ ಸದಾ ಯಾತ್ರಿಕರು ನೀವು. ಸಸ್ಯಾಹಾರಿಗಳಾಗಿ ಕಾಡು ಸೇರಿದರೆ ನೀವು, ನಿಮ್ಮನ್ನೇ ಭಜಿಸಿ ಬದುಕುವೆವು ನಾವು"[2] ಹೀಗೆ ಸೊಳ್ಳೆಗಳ ಹಾವಳಿ ಕಾಟವನ್ನು ಕಾಣಬಹುದಾಗಿದೆ.

**ಅವಕಾಶದ ಲೋಕದಲ್ಲಿ ಸಂಕಲ್ಪದ ಜೀವನ:**

**ಸಂಕಲ್ಪ:** ಬದುಕಿನಲ್ಲಿ ಸಂಕಲ್ಪ ಸಂಕರ್ಷಣ ಬೇಕಿಲ್ಲಿ ಸಂಕೋಲೆಗೆ ಸಂಬಂಧ ಇರುವುದು. ಮನವನ್ನು ತಣಿಸೋಕೆ ಮಾತುಗಳಿವೆ. ಪೂಜೆಗೆ ಸಂಕಲ್ಪ ಕೆಲಸಕ್ಕೂ ಬೇಕು ಸಂತೋಷ. ಸಂಕಲ್ಪವನ್ನು ಮನದಿಂದ ಮಾಡದೆ ನೀನು ಪೂಜೆಯು ನಡೆದರೆ ವಿಕಲ್ಪ ಎಂಬ ಅಭಿಪ್ರಾಯಗಳಿವೆ. ಮನಸ್ಸಿಗೂ ಬೇಕೊಂದು ಸಂಕಲ್ಪ ಬರಿಯ ಕರ್ಮವನ್ನು ಮಾಡಿದರೆ ಅದುಸಾಕೆ. ಮನದಿಂದ ಅರಿಯದೆ ಮಾಡಿದರೇನು ಇಂದು, ಬರಿಯ ಕೆಲಸವು ಇಲ್ಲೀ ಏಕಪ್ಪ ಎಂಬ ಅಭಿಪ್ರಾಯವಿದೆ. ಸಂಸಾರಕ್ಕೊಂದು ಸಂಕಲ್ಪವಿಲ್ಲದೆ, ಸಂಕಲ್ಪ ಏಕೆ ಇರುವುದು ನೋಡಪ್ಪ ಎಂದು ಕವಿಯಿತ್ರಿ ತಿಳಿಸುವರು.

**ಕಾಣದ ಲೋಕ:** ಕಾಣದಾ ಲೋಕಕ್ಕೆ ಮನಸಿನಾ ಆಕಳಿಕೆ. ಈ ಹೃದಯದ ಭಾವಕ್ಕೆ ಕಾಣಿಕೆಯನ್ನು ಹಾಕುವೆ. ಹೃದಯದ ಕೊಂಡಿಯ ಕಳಚಲು ಇಲ್ಲಿ ಮನಸ್ಸಿನ ಭಾವಕ್ಕೆ ಹೊಂದಿಕೆ ಆಗಿದೆ. ಹೃದಯದಲ್ಲಿರುವ ಈಶ್ವರಿಯೂ, ಮನಸ್ಸಿನ ಮಹಲಿನಲ್ಲಿ ಬಂದು ಎರಗದ ಕಷ್ಟಕೆ, ಸಿಲುಕಿದ ಕಾಮನೆಯೊಳಗೆ ಬಲಿಯೂ ಪುರುಷನಲೀ ಎಂದು ಕವಿಯಿತ್ರಿಯರು ಉಲ್ಲೇಖಿಸಿದ್ದಾರೆ. ಭೂಮಿಯು ಹಾಗೆಯೇ ಮಲಗಿದೆ. ಯಾರೋ ಅದನ್ನು ಅಳಿಸುತ್ತಾ ಇರುವಂತೆ ಸುತ್ತಲು ಆವರಿಸಿರುವ ನೀರಿನ ಪರಿಕಲ್ಪನೆಯಾಗಿದೆ. ಭಾವನೆಗಳೇ ಭೂಮಿಯೂ ಹಂಚದೆಯೇ ಬೆಂಕಿಮಳೆಯ ಕಾರುತ್ತಾ ಇರುವುದನ್ನು ಕಾಣಬಹುದು.

**ಜ್ಞಾನದ ರೊಟ್ಟಿ:** ಜ್ಞಾನವೆಂಬ ಹಿಟ್ಟಿನ ಪದವ ನಾದಿ ನಾದಿಯ ಇಟ್ಟಿದ್ದಾರೆ. ಜ್ಞಾನವನ್ನು ನಾದಿನಾದಿ ಉಂಡೆಯ ಮಾಡಿಬಿಟ್ಟಿದ್ದಾರೆ. ಜ್ಞಾನದ ವಿಷಯದ ಉಂಡೆಯನ್ನು ರೊಟ್ಟಿಯ ತರಹವೆ ಕವಿಯತ್ರಿ ತಟ್ಟಿದರು. ಜ್ಞಾನದ ರೊಟ್ಟಿಗೆ ಬೆಣ್ಣೆಯನ್ನು ಹಚ್ಚಿ ತಾವೇ ತಿಂದರು. ಜ್ಞಾನದ ರೊಟ್ಟಿಯ ಉಳಿದ ಹಿಟ್ಟನು ನಾದಿ ತಟ್ಟಿ, ಊರಿಗೆಲ್ಲವನ್ನು ಹಂಚಿದರು. ಇದರ ರುಚಿಯನ್ನು ನೋಡಿದ ಜನರು ಜ್ಞಾನದ ರೊಟ್ಟಿಯೆ ಎಂದರು. ಇನ್ನೂ ಕೆಲ ಜನರು ಜ್ಞಾನದ ರೊಟ್ಟಿಯನ್ನು ತಿಂದು ಮತ್ಸರವನ್ನು ತೋರಿಸಿ ಬೇಡವೆಂದು ಬಿಟ್ಟುಹೋದರು ಎಂದು ಕವಿಯಿತ್ರಿ

ಶಾಂತ ಕುಂಟಿನಿ (ಶಕುಂತಲಾ) ಅವರು ವಿವರಿಸಿದ್ದಾರೆ.

**ಅವಕಾಶ:** "ಯೋಚನೆಗೆ ಅವಕಾಶಗಳು ಎಲ್ಲಿ? ಪ್ರಶ್ನೆಗಳೇ ಮೂಡದಿರೆ ಮನದಲ್ಲಿ, ಅವಕಾಶಗಳಿಗೆ ಕೊನೆಯೆಲ್ಲಿ? ಮರೆತು ಕುಳಿತರೆ ಮನೆಯಲ್ಲಿ ಮನವು ಬಂದರೆ ನಾವು ಬರುವುದು. ನಾವು ಬರದಿರೆ ಮನವು ನಿಲ್ಲುವುದು. ಮನಕಿರುವ ವಿಷಯಗಳು ಹಲವಾರು, ಮನಕೆ ಬಂದರೆ ಭಾವಗಳು ನೂರಾರು"[3] ಎಂದು ಕವಿಯಿತ್ರಿ ತಿಳಿಸುತ್ತಾರೆ.

"ಕವಿಯ ಕಾವ್ಯವೆಂದರೆ ಲೋಕಭಾವದ ಅನುಕೀರ್ತನ. ಕವಿ ತನ್ನ ಪ್ರತಿಭಾಶಕ್ತಿಯಿಂದ ಅಸುಂದರವಾದುದನ್ನು ಸುಂದರವಾಗಿ ಪರಿವರ್ತಿಸುತ್ತಾನೆ. ಲೋಕಭಾವಗಳ ಅನುಕರಣೆಯನ್ನು ಆತನು ಮಾಡುವಾಗಲೂ ಅದು ಲೋಕೋತ್ತರವಾಗುವಂತೆ ನೋಡಿಕೊಳ್ಳುತ್ತಾನೆ. ಶುಷ್ಕವಾದುದರಲ್ಲಿ ರಸಸಂಚಾರವಾಗುವಂತೆ ಮಾಡುತ್ತಾನೆ. ಕಾವ್ಯದಿಂದ ಸೌಂದರ್ಯಾನುಭವ ನೀಡಿ ಸಹೃದಯನಿಗೆ ಆಹ್ಲಾದ ನೀಡುತ್ತಾನೆ. ಆಡುತ್ತಿದ್ದಂತೆ ಕರಗಿ ಹೋಗುವ ಮಾತುಗಳನ್ನು ಬಳಸಿ ಶಾಶ್ವತವಾದುದನ್ನು ನಿರ್ಮಿಸುತ್ತಾನೆ"[4] ಹೀಗೆ ಕವಿ ಕಾವ್ಯ ಸಹೃದಯರ ಸ್ಪಂದನೆಯನ್ನು ಕಾಣಬಹುದಾಗಿದೆ.

**ಸುಂದರ ಭೌಗೋಳಿಕ, ಸಾಹಿತ್ಯಿಕ, ಸಾಂಸ್ಕೃತಿಕ ದೇಶವಿದು**

**ಕಿವಿಯಲ್ಲಿ ಕಲರವ:** ವಿಶ್ವವಿಖ್ಯಾತ ಹಂಪೆಯ ಕಲ್ಲಿನನಾದ ಕಿವಿಯಲ್ಲಿ ಕಲರವ, ಸಂಗೀತ, ಸಾಹಿತ್ಯ ಸಾಂಸ್ಕೃತಿಕತೆಯ ಝೇಂಕಾರ ತುಂಬಿದ ಮಸ್ತಕವಾಗಿದೆ. ಪ್ರತಿಯೊಂದು ವಾಸ್ತುಶಿಲ್ಪದ ಕೈಚಳಕವು ಕಲ್ಲಿನಲ್ಲಿ ವಿಧವಿಧವಾಗಿ ಆಕಾರದಲ್ಲಿ ಅಭಿವ್ಯಕ್ತಗೊಂಡಿವೆ. ನೋಡುವವರ ಕಣ್ಣಿಗೆ ಹಬ್ಬವೇ ತಂದಿದೆ. ಆನಂದ ಉಂಟಾಗಿದೆ. ಕಲ್ಲಿನ ಸರಿಗಮದ ಸಂಗೀತದ ಸ್ವರನಾದ, ನಟರಾಜನ ನಾಟ್ಯಕ್ಕೆ ಇದುವೆ ತಾಳಲಯವು ಆಗಿದೆ. ಈ ಕಲ್ಲಲ್ಲಿ ಗೆಲ್ಲುವ ಛಲವಿದೆ. ಇದು ವಿಜಯನಗರವೂ ಆಗಿದೆ. ಯಾರು ನುಡಿಸಿದರೂ ಈ ಚೆಂದದ ವಾಕ್ಯವನ್ನು ಮೈ ಮರೆತಿಹೆನು ಎಂದು ಕವಿ ಈ ಸ್ವರಲೋಕದ ಸಗ್ಗದ ಸಂತೋಷವನ್ನು ತಿಳಿಸುವರು. ಕವಿ ಶ್ರೀಶೈಲ ಬಿರಾದಾರ ಅವರು ಹೇಳುತ್ತಾರೆ. ನಾ ಬರೆವೆ ಈ ನಾಡ ಇತಿಹಾಸವನ್ನು ಕನ್ನಡ ಸಾಹಿತ್ಯವನ್ನು ಬೆಳೆಸುವೆನು ಎನ್ನುತ್ತಾರೆ.

**ಜೋಗದ ಗುಂಡಿಯ ಮ್ಯಾಗ:** ಜೋಗದ ಗುಂಡಿಯ ಮ್ಯಾಗ ಚಂದಿರಾಮ ಬಂದು ಕುಂತನು. ಅವನ ಅಂದ ಚಂದ ಎಂತಹದು ಕಾಣುತ್ತಿದೆ. ಶಿವನ ಜಡೆಯಿಂದ ಗಂಗೆಯ ಪ್ರಪಾತ ಕಂಡು ಚಂದ್ರನು ನಲಿದನು ಬೆಳಕನ್ನು ಚೆಲ್ಲಿದನು. ಕಾಡಿನ ಹಸಿರಲ್ಲಿ ಬೆಟ್ಟದ ಝರಿಯಲ್ಲಿ ಬೆಳದಿಂಗಳ ಚೆಲ್ಲಿ, ಅದರ ಪ್ರತಿಬಿಂಬ ನೀರಲ್ಲಿ ಕಂಡು ಬರುತ್ತಿತ್ತು. ಜೋಗ ಜಲಪಾತವು ಹರಿದು ಸಾಗುವ ಭರವನ್ನು ಕಂಡು ಆಕಾಶದಿಂದ ಭೂಲೋಕದಲ್ಲಿ ಬಿಂಬವನ್ನು ತೋರುತ್ತಾ ಬರುತ್ತಿರುವನು. ಈ ಚಂದಿರನು ಚೆಲುವ ರಾಶಿಗೆ ಮುತ್ತಿಟ್ಟ ಹಾಗೆ ಹೊಳೆವ ಮಾಣಿಕ್ಯವಿದಂತೆ, ಇರುಳಲ್ಲಿ ಹುಣ್ಣಿಮೆಯ ಹಂದರ ಚಂದಿರ ಪ್ರಕಾಶಿಸುತ್ತಿದ್ದಾನೆ.

**ಭಾರತ ದೇಶ ನಮ್ಮದು:** ಭಾರತೀಯರು ನಾವು ಭಾರತದೇಶ ನಮ್ಮದು. ಸರ್ವಮನುಜ ಕುಲ ನಮ್ಮದು. ಬಿಳಿಯರು, ಕರಿಯರು ಎಂಬ ಬೇಧ, ಭಾವ ತೋರದು, ಇದುವೇ ನಮ್ಮ ಭಾರತವು ಆಗಿದೆ. ಸಾಂಸ್ಕೃತಿಕ ಪರಂಪರೆಯ ತಾಣವು ದೇಶ, ವಿದೇಶಿಯರ ನೆಚ್ಚಿನ ನೆಲೆವೀಡಾಗಿದೆ. ರಾಮರಾಜ್ಯವು ನಮ್ಮದು. ಇಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತಧರ್ಮದ ಸರ್ವಧರ್ಮ ಸಹಿಷ್ಣುತೆಯನ್ನು ಸಹಬಾಳ್ವೆಯ ಬಾಂಧವ್ಯ ಬೆಸೆದ ಈ ದೇಶವಾಗಿದೆ. ಐತಿಹಾಸಿಕ ಕಟ್ಟಡಗಳ ಇತಿಹಾಸ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಗೋಳಗುಮ್ಮಟ, ತಾಜ್‌ಮಹಲ್, ರಾಜ್ಯಸ್ಥಾನದ ಗರಿದುರ್ಗ, ರಾಜ ಮಹಾರಾಜರ ಸ್ಮಾರಕಗಳು ಇದಕೆ ಉದಾಹರಣೆಯಾಗಿವೆ. ಈ ಪ್ರಕೃತಿ ಸೌಂದರ್ಯದಲ್ಲಿ ಪುಣ್ಯನದಿಗಳ ಸೌಂದರ್ಯದಲ್ಲಿ ಗಂಗಾ, ಯಮುನಾ, ಬ್ರಹ್ಮಪುತ್ರ,

ಕಾವೇರಿ, ಕೃಷ್ಣಾ ಮೆರೆದವು. ಹಲವು ಬಗೆಯ ಗಿಡ–ಮರಗಳು, ಶ್ರೀಗಂಧ, ತೇಗ, ಸೀಸ, ಮಾವು, ಅರಳಿಮರ, ಆಲದಮರ ಸೌಂದರ್ಯವನ್ನು ಮೊಳಗಿಸಲು ಮುಂದಾದವು. ಔಷಧಿ ಗುಣವುಳ್ಳ ಅಂಶಗಳು ಅಭಿವ್ಯಕ್ತಗೊಂಡವು. ರಾಮಾಯಣ, ಮಹಾಭಾರತ ಮಹಾಕಾವ್ಯಗಳೂ. ಶ್ರೀಕೃಷ್ಣನ ಭಗವದ್ಗೀತೆಯ ನೀತಿಸಾರದ ಪುರಾಣದ ನೆಲೆವೀಡು ಇದು. ಕವಿಗಳ ನೆಲೆ ಪಾಶವಾಗಿದೆ. ಕೋಗಿಲೆಯಾಗಿ ಹುಟ್ಟಿ ಬರುವೆ ಎಂಬ ಕವಿ ಆಶಯ ಆಗಿದೆ. "ಎಂಟು ಕೋಟಿ ಕನ್ನಡಿಗರಲ್ಲಿ, ಅಷ್ಟದಿಗ್ಗಜರು ಕೋಟಿಗೊಬ್ಬರಂತೆ ಹುಟ್ಟುತಿಹರು, ಕನ್ನಡ ಮಾತೆಯ ಮಡಿಲಲ್ಲಿ ಸಾಹಿತ್ಯದ ಸವಿಯಮೃತ, ನೀಡುತಿಹರು ಈ ಜಗಕೆ. ಕಥೆ ಕಾವ್ಯದ ರಸಾಮೃತ ಸುರಿಯುತಿಹರು, ನಮ್ಮ ಮನಕೆ ಜ್ಞಾನಪೀಠ, ಸಾಹಿತ್ಯಪೀಠ, ಕನ್ನಡ ತಾಯಿಗೆ ಅದುವೇ ಕಿರೀಟ. ಒಂದರ ಮೇಲೊಂದರಂತೆ, ತೊಡಿಸುತಿಹರು ಜ್ಞಾನ ಜೇಷ್ಠರು. ಈ ಭುವಿಯ ಮಹಿಮೆಯೋ ನಾಡಭಾಷೆಯೋ, ಕನ್ನಡಾಂಬೆಯ ಎದೆ ಹಾಲ ಸಿರಿಯೋ, ಇದು ಜ್ಞಾನ ತುಂಬಿದ ಬೆಟ್ಟದಗಿರಿಯೋ ನಾ ಕಲಿವೆ ಈ ಜ್ಞಾನಸಾಗರ, ನಾ ಕುಡಿವೆ ಈ ಅಮೃತವ ಕಳೆವೆ ನನ್ನ ಪ್ರಾಣ ಈ ನಾಡಿಗಾಗಿ, ಕನುಮ ಜನುಮಾಂತರ"[5] ಹೀಗೆ ಕನ್ನಡ ಸಾಹಿತ್ಯಕ್ಕೆ ಅಷ್ಟದಿಗ್ಗಜರು ಜ್ಞಾನಪೀಠ ಪ್ರಶಸ್ತಿ ಲಭಿಸಿದ ಮಹತ್ವ ಕುರಿತು ವಿವರಿಸಿದ್ದಾರೆ. ಶ್ರೀಶೈಲ ಮಲ್ಲನಗೌಡ ಬಿರಾದಾರ, ಅವರು ರಚಿಸಿದ ಅಷ್ಟದಿಗ್ಗಜರು ಎಂಬ ಕವನದಿಂದ ಈ ಮೇಲಿನ ಮಾಹಿತಿ ಲಭ್ಯವಾಗುತ್ತದೆ.

**ಮಾತಿನ ಮಾರ್ಗದರ್ಶನವೇ ದಾರಿದೀಪ :**

**ಭಯ – ಕೆ.ಎಸ್. ಚಿದಾನಂದ:** ಚಳಿಜ್ವರ ಬಂದು ಇದು ಘೋರ, ನಡುಕ, ಬುದ್ಧಿ ಕುಟುಕ, ಮಂಪರು ಮಾತ್ರ ಕೆಲವರಿಗೆ ಬಂದರೆ ಭಯವಾಗುತ್ತದೆ. ಕೆಲವರಿಗೆ ಹೀಗೆ ಅನುಭವ, ಜಾಲಿಮುಳ್ಳು, ಹುಚ್ಚಜ್ವಾಲೆಗೆ ಬಿಸಿತುಪ್ಪ, ಒಬ್ಬೊರಿಗೆ ಕಂಡುಬರುತ್ತದೆ. ಅದರ ನೋವಿನಿಂದ ಪಕ್ಕೆಲುಬು ಮುರಿದು ಹಸಿಕಾಯ ಹಣ್ಣು ಮಾಡಿ ಮುಕ್ಕಲರಿಗೆ ಹೆದರುವರಿಗೆ 'ಪುರ್' ಎಂದು ಆಯಾಸಮಾಡುವುದು. ಆದ್ದರಿಂದ ಭಯದ ಮೂಲವನ್ನು ಅರಿಯಿರಿ ಬದುಕಿರಿ. ಸೌಖ್ಯದಿಂದ ಸದಾಕಾಲ ಎಲ್ಲರೂ ಎಂದು ಕವಿಯೂ ಸಲಹೆಯನ್ನು ನೀಡುವರು. ಬೆಳಕು ಮುಗಿದು ಕತ್ತಲೂ ಆವರಿಸಿದರೆ ಭಯ ಶಿಷ್ಯರಿಗೆ ದುಷ್ಟ ಭ್ರಷ್ಟರ ವಕ್ರದೃಷ್ಟಿಯೇ? ಏನೆಲ್ಲಾ ಅವಾಂತರಕ್ಕೆ ಕಾರಣವಾಗುತ್ತದೆ. ದುಷ್ಟರಿಗೆ ತಾವು ಮಾಡಿದ ಪಾಪದ ಪ್ರತಿಬಿಂಬ ಎಂಬಂತೆ ಕನಸಿನ ಕರಾಳತೆಯೇ ಭಯವಾಗಿದೆ. ಅಜ್ಜ ಹಾಕಿದ ಆಲದಮರ ಬೇರುಗಳನ್ನು ಹಿಡಿದು ಆಟವಾಡಲು ಕಾಣದ ಕಲ್ಪನೆಯಿಂದ ಘೋರತೆಯ ಭಯವು ಬರುತ್ತದೆ. ಗಾಳಿಗೆ ಹೆದರಿ ಭಯವು ಆವರಿಸುತ್ತದೆ. ತಲೆ ತಿರುಗುತ್ತದೆ, ಏನೆಲ್ಲ ಅನಾಹುತಕ್ಕೆ ಮೂಲ ಕಾರಣವಾಗುತ್ತದೆ. ಆಟವಾಡುವಾಗ ಬೊಂಬೆಗಳನ್ನು ನೋಡಲು ಮನಸ್ಸಿಗೆ ನೋವಾಗಿ ಕಣ್ಣು ಮುಚ್ಚುವುದು ಭಯವು ಆವರಿಸುತ್ತದೆ. ಶ್ರೀಮಂತರಿಗೆ ಸಿರಿಸುರಿದ ಜಾಗದ ಭಯ, ಬಡವನಿಗೆ ಸಾಲಗಾರನ ಭಯ, ಗರತಿಗೆ ಗಂಡನು ನಡೆಯುವ ನಿರ್ಧಾರದ ದಾರಿಯ ಭಯ, ಪತಿಗೆ ಹೆಂಡತಿಯ, ದುಡಿವ ಸ್ಥಳದ ಬಗ್ಗೆ ಭಯವನ್ನು ತರಿಸುತ್ತದೆ. ಆತ್ಮಸ್ಥೈರ್ಯವನ್ನು ತುಂಬಿಕೊಂಡು ಅದನ್ನು ನಂಬಿ ನಿಮ್ಮೊಳಗಣ ನಿಮ್ಮನುಳಿಸಿ ನೆಮ್ಮದಿಯ ಬದುಕನ್ನು ಕಂಡುಕೊಳ್ಳಿ ಎನ್ನುವ ಕವಿಯ ಸಹಾಯ ವಾಣಿಯಾಗಿದೆ. ಭವಿತವ್ಯದಲ್ಲಿ ಭಯವನ್ನು ತುಳಿದು ಬದುಕಿ ಹಸನಾಗಿ ಎಂಬುದು ಆಶಯವಾಗಿದೆ.

**ದಾರಿದೀಪ:** ಮನವೇ ಒಲವು ಮೌನವಾಯಿತೆ? ಕೊರಗಿದರು, ಕರಗಿದರು ನಿನ್ನ ಕೊರಗೆ ಕೇಳೊ ಎಲ್ಲ ಕಿವಿಗಳೂ ಕಿವುಡು ಆಗಿವೆ. ಎಚ್ಚರ, ಎಚ್ಚರವಾಗಿರು ಕಣ್ಣುಗಳಲ್ಲಿಯೂ ಭಾವನೆಗಳಿಂದ ಮಾತನಾಡಿ, ಕೈಗಳಲ್ಲಿ ನಡೆದು ನಂಬಿದ ಒಡಲಿಗೆ ಎರಡು ದ್ರೋಹ ಬಗೆಯುವರು ವಿಷಸರ್ಪಗಳ ಅಕ್ಕಪಕ್ಕವಿದ್ದು ಹೀಗೆ ವಿಷ ಕಕ್ಕುವರು. ಎಲ್ಲರೂ ಮೂಢರಲ್ಲ ಇಲ್ಲಿ. ಅನುಮಾನವಿಲ್ಲ. ನೀ ಶತಮೂಢನಾಗಿರುವೆ. ಅಸಹಾಯಕನಾಗಿ ಕೆಳಗೆ ನೀ ಬಿದ್ದಿರುವೆ. ನಿನ್ನನ್ನು

ಮೇಲೆ ಎತ್ತುವವರು ಯಾರು? ಎಂಬ ಪ್ರಶ್ನೆಯನ್ನು ಕವಿ ಮಾಡುತ್ತಾರೆ. ಬರೆಯ ಮೇಲೆ ಬರೆಯನ್ನು ಎಳೆಯುವವರು. ನಂಬಿಕೆಯ ಗುಂಡಿಗೆಯ ಮೇಲೆ ನೆತ್ತರು ಕಾರುವಂತೆ ಕೊರೆದವರು. ಉಸಿರಾಡಲು ಕಷ್ಟ ನೀಡುವರು. ಅಕ್ಕಪಕ್ಕದಲ್ಲಿ ಕಾಲುಗಳಿಲ್ಲ, ನುಡಿವ ಬಾಯಿಗಳು ಇಲ್ಲ, ಏಕಾಂಗಿಯಾಗಿರುವ ಪರರನ್ನು ನೆಚ್ಚಿ ಈ ಲೋಕದಲ್ಲಿ ಫಲವಿಲ್ಲ. ನಿನ್ನ ಗುರಿ ತಲುಪಲು ಮೈಯ ಕೊಡವಿ ಎದ್ದು ನಿನಗೆ ನೀನೇ ದಾರಿ ದೀಪವಾಗು ಎಂದು ಕವಿಯೂ ಆತ್ಮಧೈರ್ಯವನ್ನು ತುಂಬುವರು.

**ಮಾತು:** ತುಟಿಯಿಂದ ಜಾರಿದ ಒಂದು ವಕ್ರಮಾತು? ಗುಡುಗಿ, ಮಿಂಚಿ, ಸಿಡಿಲಾಗಿ ಬಡಿದು, ಹೃದಯಗಳ ಸೇತುವೆಲಿ ಬಿರುಕೊಡೆಸಿ, ನಗುವ ಉಸಿರಿಗೆ ಉರುಳಾಗಬಹುದು. ಸಂತಸದಿ ನುಡಿವ ಒಂದು ಸವಿಮಾತು? ತಂಗಾಳಿ ಸೂಸಿ ದ್ವೇಷವಳಿಸಿ, ಬರಡು ನೆಲದಲ್ಲಿ ಹಸಿರ ಚಿಗುರಿಸಿ, ಅಳಿವ ಜೀವಕೆ ಜಲಾಮೃತ ಉಣಿಸಬಹುದು. ಮಾತು ತುಟಿ ಬಿಡುವ ಮುನ್ನ? ಗದ್ದಿ ತೀಡಿ ಶುಭ್ರಗೊಳ್ಳಲಿ. ಆಯತಪ್ಪಿ ಹೊರಬಿದ್ದ ಮಾತು, ಕಂಟಕದ ಘಂಟೆ ಹೊಡೆಯದಿರಲಿ"[6] ಎಂದು ಕವಿಯು ಮಾತಿನ ಮಹತ್ವವನ್ನು ಇಲ್ಲಿ ತಿಳಿಸುತ್ತಾರೆ.

**ಲೋಕದಲ್ಲಿ ಸಮಾನತೆಯ ಅವಕಾಶಗಳು**

**ಸಮಾನತೆ – ಡಾ. ಚಂದ್ರಮಾ ಎಸ್. ಕಣಗಲಿ:** ಲೋಕದೊಳಗೆ ಆಚರಣೆಗಳು ವೈವಿಧ್ಯತೆಯಿಂದ ಕೂಡಿವೆ. ಮಸೀದಿಯಲ್ಲಿ ಆಚರಣೆಯನ್ನು ಕಂಡೆ ಆಕಾಶದತ್ತ, ನೋಡಿ ಮತ್ತೆ ಸ್ವರ್ಗದಲ್ಲಿ ಇರುವಾತನಿಗೆ ತಲೆಬಾಗಿ ಭೂಮಿಗೆ ಹಣೆಯನ್ನುವುದನ್ನು ಚರ್ಚಿನಲ್ಲಿ ನೋಡಿದರೆ ಮಂಡಿಯೂರಿ ಪ್ರಾರ್ಥಿಸುವುದನು ನೋಡಬಹುದು. ಮಂದಿರದಲ್ಲೂ ಮೊಣಕಾಲೂರಿ ತಲೆಯನ್ನು ಬಾಗುವುದನ್ನು, ಕಾಣದಿದ್ದರೂ ಎಲ್ಲೆಡೆಯಿರುವ ಪಸರಿಸಿರುವ ಶಕ್ತಿಗೆ ಭಕ್ತಿಯಿಂದ ಶರಣೆಂಬ ಸಂಸ್ಕೃತಿ ಮಾನವಕುಲವೊಂದೆ ಎಂಬುದನ್ನು ಸಾರುತ್ತವೆ ಎಲ್ಲವೆ? ನಾವೆಲ್ಲರೂ ನಾಗರಿಕರೂ ಒಂದೇ ಆಗಿರುವೆವು ಎಂಬ ಸಂದೇಶವಿದೆ.

**ಯಾಂತ್ರಿಕತೆ:** ಆಧುನಿಕತೆಯಲ್ಲಿ ಹೊಸ ಆವಿಷ್ಕಾರಗಳು ರೂಪುಗೊಳ್ಳುತ್ತಿರುತ್ತವೆ. ತಾಂತ್ರಿಕತೆಯಲ್ಲಿ ನಾವು ಮುನ್ನಡೆದಿದ್ದೇವೆ ಎಂದು ಬೀಗುವವರು ತಂತ್ರಗಾರಿಯಲ್ಲೆಂದು ಹಿಂದೆ ಬಂದಿಲ್ಲ. ಯಾಂತ್ರಿಕತೆ, ತಾಂತ್ರಿಕತೆಗಳು, ತರ್ಕವಿತರ್ಕಗಳು, ವಾದ, ಸಂವಾದಗಳು ಏನೆಲ್ಲ ಆಗಿವೆ. ಆದರೆ ಹುಲ್ಲು ಚಿಗುರಿಸಬಲ್ಲವೆ. ನೀರನ್ನು ಸುರಿಸಬಲ್ಲವೆ? ಹೋದ ಜೀವ ಮರಳಿಸಿಯಾವೆ? ಎಂದು ಕವಿಯಿತ್ರಿ ಡಾ. ಚಂದ್ರಮಾ ಎಸ್. ಕಣಗಲಿ ಅವರು ವಿವರಿಸುತ್ತಾರೆ. ಪರಮಾತ್ಮನಿಗೆ ದೇವರಲ್ಲಿ ಇರುವುದು ಆ ಶಕ್ತಿ. ಅದಲ್ಲೆ ಪವಾಡ ಪುರುಷರು ತಲೆಬಾಗುವರು.

**ನವಯುಗ:** ಕಾಲನ ಕಾಲು ತುಳಿತಕ್ಕೆ ಸಿಲುಕಿ ನುಚ್ಚು ನೂರಾಗುತಿರೆ ಈ ಬದುಕು ಗಾಳಿ ಮಳೆಯನ್ನು ನೆಲಸಮ ಮಾಡುತ್ತಿವೆ. ಹರಿಸ್ಮರಣೆಯನ್ನು ಮಾಡುತ ನಿರಂತರ ಆತನಲ್ಲಿ ಬೇಡು. ಕಲಿಯುಗ ಕಣ್ಮರೆ ಆಗುವ ಕಾಲ ಅಸುರಾತ್ಮರು ಅಸುನೀಗುವ ಕಾಲವಿದು. ಪ್ರಳಯದಲ್ಲಿ ಕೊಚ್ಚಿ ಹೋಗುವ ಕಲಿಗಾಲವಿದು. ಕಣ್ಮುಂದೆ ಕೋಟಿ ರುದ್ರರೂಪ ತೋರುತ್ತಿದೆ. ದೇವರ ನಾಮಸ್ಮರಣೆ ಮಾತು. ಭೂಮಿಯಲ್ಲಿ ಬೆಳೆದ ಫಸಲು ಕಳೆಕಿತ್ತಿ ಹೋಗುತ್ತಿದೆ. ಬೆಳೆ ಬೀಜವೂ ನಾಶವಾಗುತ್ತಿವೆ. ಮನುಜರು ಮುಳುಗುತ್ತಿರುವ ದೇವರ ನಾಮಸ್ಮರಣೆ ಮಾಡು ಎಂಬ ಹಾರೈಕೆಯಿದೆ. ಸಂಶಯ ಬೇಡ, ಕಾಲನ ಭಯ ಬೇಡ, ಸತ್ಯ ಸ್ವರ್ಣಯುಗ ಸನಿಹ ಬರುತ್ತಿದೆ. ದೇವರ ನಿರಂತರ ಕೃಪೆಯನ್ನು ಬೇಡು ಎಂಬ ಆಶೀರ್ವಚನಗಳಿವೆ.

"ಆ ಊರಿನಲ್ಲಿ ಮನುಷ್ಯರೂ ಇಲ್ಲ ಮನುಷ್ಯತ್ವವೂ ಇಲ್ಲ" ಅಂದಿದ್ದ ಅಪ್ಪನ ಮಾತು ನೂರಕ್ಕೆ ನೂರು ಸತ್ಯ ಬಹುಮಹಡಿಗಳ ಪಕ್ಕದ ಓಣಿಯಲ್ಲಿ ಜೋಪಡಿಗಳು. ಓಡಾಡುವ ಬೆಂಜ್–ಮರ್ಸಿಡಿಸ್‌ಗಳ ಮಧ್ಯಮಧ್ಯ ಭಿಕ್ಷೆ ಬೇಡುವ ಕುಂಟರು, ಕುರುಡರು, ಹಸುಳೆಗಳನ್ನು ಹೊತ್ತ ಹೆಂಗಸರು, ಆಸ್ಪತ್ರೆಗಳಲ್ಲಿ

ಕಛೇರಿಗಳಲ್ಲಿ ಸುಲಿಗೆ ಮಾಡುವ ನೌಕರರು, ಧನ್ಯತೆಗೆ ದಯೆಯಿಲ್ಲ, ನೋವುಂಡವರ ಕೇಳುವವರಿಲ್ಲ ಅಸಹಾಯಕರಿಗೆ ಗೌರವವಿಲ್ಲ. ಸಾಕಿದ ಪ್ರಾಣಿಗಳಿಗೆ ತೋರುವ ಪ್ರೀತಿ ಮನುಷ್ಯರಿಗಿಲ್ಲ, ಎಲ್ಲಿ ಹೋದರೂ ಏನೆ ಆದರೂ ಬೆಲೆ ಕೊಡುವುದು ಕಾಸಿಗೆ ಮಾತ್ರ. 'ದುಡ್ಡಿದ್ದವನೆ ದೊಡ್ಡಪ್ಪ' ದುಡ್ಡೊಂದೆ ಸರ್ವಸ್ವ ಮನುಷ್ಯ ಮನುಷ್ಯರನ್ನು ಬೆಸೆಯುವ ಮನುಷ್ಯತ್ವದ ಕೊಂಡಿಯೇ ಇಲ್ಲ"[7] ಎಂದು ಕವಿಯಿತ್ರಿ ಈಗಿನ ಜನರ ಒಲವು ತಂದೆಯ ಮಾತಿನ ಸತ್ಯವನ್ನು ಕುರಿತು ವಿವರಿಸಿದ್ದಾರೆ.

**ಜ್ವಲಂತ ಸಮಸ್ಯೆಗಳಿಗೆ ಪರಿಹಾರಗಳು**

**ಕಳಸಾ–ಬಂಡೂರಿ, ಮಹದಾಯಿ ಯೋಜನೆ: ಸುರೇಶ ನಾವಿ:** ಮೈಕ್ ಸಿಕ್ಕರೆ ಮಾತನಾಡುತ್ತಾ ತಮ್ಮ ಪರಿಚಯವನು ಮಾಡಿಕೊಳ್ಳುವರು. ಎಲೆಕ್ಷನ್ ಟೈಮ್‌ನಲ್ಲಿ ಜನರ ಕಾಲಿಗೆ ಬಿದ್ದು ಮತ ಪಡೆಯಲು ಯತ್ನಿಸುವರು. ಕಾಟಾ ಕೊಡ್ರಿ, ಬ್ಯಾಡ ಅನ್ನುವುದಿಲ್ಲಾ, ಪಕ್ಷದಿಂದ ಪಕ್ಷಕ್ಕೆ ಹಾಂಗ್ ಜಿಕ್ಕೋತ್ ಹೋಗುತ್ತಾ ಇರ್ರಿ. ಚುನಾವಣೆಯಲ್ಲಿ ಆರಿಸಿ ಬಂದಮೇಲೆ ಕೆಳಮನಿಯೋ ಮೇಲ್ಮನಿಯೋ ದೊರೆತಮೇಲೆ ಅಲ್ಲ ಏಟು ಆಕಳ್ಸ ಬ್ಯಾಡ್ರಿ, ತುಕಡ್ಸಬ್ಯಾಡ್ರಿ, ನಿಮ್ಮ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರದ ಮಾರ್ಗ ಹುಡುಕಿರಿ. ಯಾಕೆಂದರೆ ಬೇಸಿಗೆ ಬಂದು ಬರಗಾಲ ಬಿದ್ದಿದೆ. ಬೆನ್ನಿಗೆ ಬಿಸಿ ಬರಿ ಬಿದ್ದಂಗ್ರಿ ಆಗಿದೆ. ಇಂತಹುದರಲ್ಲಿ ಅಷ್ಟು ಇಷ್ಟು ಬೆಳೆದ ಬೆಳೆಯ ಫಸಲಿಗೆ ಸರಿಯಾದ ಬೆಲೆಯು ಸಿಗುತ್ತಿಲ್ಲ. ಇದಕ್ಕೆಲ್ಲ ಹೋರಾಟ ಮಾಡಿದ ಎಷ್ಟೋ ರೈತರೆಲ್ಲರೂ ಉಸಿರು ನಿಂತು ಮರಣವನ್ನು ಹೊಂದಿದ್ದಾರೆ. ತಾವು ಆರಿಸಿ ಬಂದಿದ್ದಕ್ಕೆ ಭಾಗ್ಯದ ಬಾಗಿಲು ತೆರೆದಿದೆ ಎಂದು ಹೇಳುತ್ತಾನೆ. ನಮಗೆ ಪರಿಹಾರ ಎಂದು ಹೇಳಿ ರೊಕ್ಕ ಕೊಟ್ಟು ಮರೆಸಬೇಡಿರಿ ಎಂಬ ವಿನಂತಿಯಿದೆ. ಸಾಂತ್ವನ, ಸಮಾಧಾನ ಎಂದು ಹೇಳಿ ನಾಲ್ಕು ಒಳ್ಳೆಯ ಮಾತುಗಳನ್ನು ಆಡಿ ಚಲೋ ಎನ್ರಿ ಎಂಬ ಪ್ರಶ್ನೆಗಳನ್ನು ಕವಿ ಸುರೇಶ ನಾವಿಯವರು ಮಾಡುತ್ತಾರೆ. ಓ.ವಿ., ಪೇಪರ್, ಮಾಧ್ಯಮದಾಗ ನೀವು ಎಷ್ಟು ಫೇಮಸ್ಸು ಆಗಿರಿ ಬಿಡ್ರಿ. ಇನ್ನಾದರೂ ದೇಶದೊಳಗೆ ಕಷ್ಟವನ್ನು ನುಂಗಿದ ರೈತರ ಕಣ್ಣೀರನ್ನು ಒರೆಸುವ ಜೊತೆಯಾಗಿ ಕೆಲಸಮಾಡಿ. ಕನ್ನಡನಾಡಿನ ಕಳಸದಂಗ ಇರುವ ಕಳಸಾ ಬಂಡೂರಿ, ಮಹದಾಯಿ ಯೋಜನೆ ಜಾರಿ ತರಲು ಮನಸ್ಸು ಮಾಡಿರಿ. ಪರಿಹಾರ ದೊರೆಕಿಸಿ ಕೊಡಿ ಇಲ್ಲ ಎಂದರೆ ನೊಂದವರ ಕಣ್ಣೀರು ನಿಮ್ಮ ಹಣೆಬರಹವನ್ನು ಬರಿತಾವೆ ಇದು ಖರೆ ನೋಡಿರಿ.

**ಹಸಿವು:** ವಿಚಾರಿಸಿ ನೋಡಿ ವಿನಾಯಿತಿ ಯಾರಿಗಿಲ್ಲಾ ಹಗಲು ಇರುಳು ಮೆಟ್ಟಿ ನಿಂತು, ಹೊಂಗಿರಣಗಳು ತಟ್ಟಿ ಬಂದು ಹೊರಟರು. ನೀ ಜಟ್ಟಿಯಂತೆ ಛಲಬಿಡದೆ ಬದುಕುವುದು ಅನಿವಾರ್ಯವಾಗಿದೆ. ಗಟ್ಟಿಯಾಗಿ ನಿಲ್ಲುವುದು ಅವಶ್ಯಕತೆಯಾಗಿದೆ. ಯಾಕೆಂದರೆ ನಾವು ಬದುಕಬೇಕು. ಮನಸ್ಸು ಬದಲಿಸಿದರು ಮುನಿಸಿಕೊಂಡರು, ಸಹಕಾರ ಕೊಡಲಾರೆ, ಪರಿಸ್ಥಿತಿಯೊಂದಿಗೆ ರೂಪದ ಆಕಾರ ಬದಲಿಸುವೆ. ನಮ್ಮ ಹಣೆಬರಹವು ಬದಲಾದರೂ, ಹಣಿಯಲ್ಲ ಯಾರಿಗೂ ಯಾಕೆಂದರೆ ನಾವು ಪಡೆದುಕೊಂಡು ಬಂದುದು ಆಗಿದೆ. ಹಸಿವೆ ಕೊನೆಯವರೆಗೂ ಧಣಿಯಾಗಿ ಮೆರೆಯುವೆ ನಾವು ಕೊನೆಯ ಉಸಿರು ಎಳೆದರೂ ನಿನ್ನ ಎಲ್ಲರಿಗೂ ಬೇಕಾಗಿರುವೆ.

**ವಿಶ್ವಗುರು:** ವಿಶ್ವಗುರು ನೀ ವಿದ್ಯಾಕುಲುಮೆ. ತಾಯಿ ಭಾರತಿ ಎಂಥಾ ಚೆಲುವೆ. ಸಹನೆ ಶಾಂತಿಯು ಶಿಲ್ಪಕಲೆಗೆ, ನಿತ್ಯ ನಮಿಪಿವು ವಿಶ್ವದೊಲುಮೆ. ಇಲ್ಲ ಆಳಿದರ ಮನೆ ಕೋಟೆ ಕೊತ್ತಲು, ಕೂಗಿ ಕರೆಯುತ್ತಿವೆ. ಹರುಷ, ಮೊತ್ತಲು, ಸಂತ ಶರಣರ ನುಡಿಯ ಒಕ್ಕಲು, ಸವೆಯದ ಹಾಗಿಗೆ ಇದುವೆ ಮೆಟ್ಟಿಲು, ಸರ್ವಧರ್ಮದ ಸಾಸಿರ ಸಿಂಬೆ, ನಿತ್ಯ ನೂತನ ಸಿಂಧು ಗಂಗೆ. ಮತ್ತೇ ಪಾವನ ಕೃಷ್ಣೇ, ತುಂಗೆ ಕೂಡಿ ಕಣಿದರೆ ಹೊನ್ನ ಗಡಿಗೆ. ಹಲವು ಭಾಷೆಯ ಸ್ವರದ ನಾದವು ನಾಟ್ಯ ಕಾವ್ಯದ ಮಧುರ ಭಾವವು. ಒಂದೆ ಆಗಿವೆ ಇಲ್ಲಿ ಎಲ್ಲವೂ ಪುಣ್ಯಭೂಮಿಯ ಸಿರಿಯ ಒಡಲೊಳು"[8] ಹೀಗೆ

ಪ್ರಪಂಚದಲ್ಲಿ ಭಾರತ ದೇಶವನ್ನು ವಿಶ್ವಗುರು ಎಂಬ ಮಾನ್ಯತೆಯನ್ನು ಕುರಿತು ವಿವರಿಸುತ್ತಾರೆ.

**ಕತ್ತಲ ಬದುಕಿನಲ್ಲಿ ಬೆಳಕಿನ ಆಶಯ:**

**ನಿದ್ರೆ ಇಲ್ಲದ ರಾತ್ರಿಗಳು – ರವಿ:** ಮಾತನಾಡುವಂತಾಗಿದೆ ನಿದ್ದೆ ಇಲ್ಲದ ರಾತ್ರಿಗಳಲ್ಲಿ ಏಕೆ ನಿನ್ನದೆ ಜಪ ತಪ ಮಾಡುವಂತಾಗಿದೆ. ಜೀವನದಲ್ಲಿ ನೀನಿಲ್ಲದ ಪರಿಸ್ಥಿತಿಯಲ್ಲಿಯೂ ಬದುಕಲೇಬೇಕೆಂಬ ಹಠವೂ ಹತ್ತರಷ್ಟಾಗಿದ್ದಂತೂ ಸುಳ್ಳಲ್ಲ. ಜೀವನ ಕಲಿಸಿದ ಪಾಠ ಧೈರ್ಯ ತುಂಬಿದೆ. ಕತ್ತಲ ತುಂಬಿದ ಜಗದಲ್ಲಿ ಕೊರಗಬೇಕು ಎಂದು ನಿಯಮವನ್ನು ಯಾರು ಜಾರಿಗೆ ತಂದವರು. ನಕ್ಷತ್ರಗಳು ಅನಾಥರಿಗೆ ಜೊತೆಯಾಗುತ್ತವೆ, ಆದರೆ ಭಗ್ನ ಪ್ರೇಮಿಗಳಿಗೆ ಯಾಕೆ ಜೊತೆ ಆಗುವುದಿಲ್ಲ. ಕತ್ತಲ ಬದುಕಿನಲ್ಲಿ ಬೆಳಕಿನ ಆಶಯ ಕವಿ ರವಿಯು ಬಯಸುತ್ತಾರೆ. ಚಳಿಗಾಲದಲ್ಲಿ ತಂಗಾಳಿ ತಪ್ಪಿದ್ದರು, ಬೆಚ್ಚನೆಯ ಅನುಭವ ಯಾಕೆ ನನಗೆ ಎಂದು ಪ್ರಶ್ನೆ ಎಸೆಯುತ್ತಾರೆ. ನೊಂದ ಮನದ ನರಳುವುದರ ಪರಿಣಾಮ ಏನೋ ಎಂದು ವಿಚಾರಿಸುತ್ತಾರೆ. ಕನಸಿಗೂ ಬರಬೇಡ ಎಂದು ಹೇಳಿದರೂ ಕಂಡು ಕೊರಗಬೇಕಾಗುತ್ತದೆ. ಈಡೇರದೆ ಇದ್ದಾಗ ನಿದ್ರೆಯಿಲ್ಲದೆ ಎಚ್ಚರವಾಗಿ ಕುಳಿತಾಗ ನನ್ನ ಹೆಸರೇ ನನಗೆ ಕೇಳಿಸಿದಂತೆ ಆಗಿದೆ. ಖಾಲಿಯಾಗಿರುವ ಹೃದಯದಲ್ಲಿ ಎಲ್ಲರಿಗೂ ಕೇಳುವಂತೆ ಕೂಗಿದಂತಾಗಿದೆ. ಅಂದು ಕೊಟ್ಟ ಬೀಳ್ಕೊಡುಗೆಯಲ್ಲಿ ಖಾಲಿಯಾದ ಕಣ್ಣೀರು, ಇಂದು ನಗುವಿನಲ್ಲಿ ನೆನೆಯುವಂತೆ ಮಾಡಿದೆ. ಈಗ ನಕ್ಕು ನೋವಿಲ್ಲ ಎಂದು ಹೇಳುವುದು ಅಭ್ಯಾಸವಾಗಿದೆ. ಜೀವನದಲ್ಲಿ ಬಂದಂತಹ ಸಮಸ್ಯೆಗಳಿಗೆ ಕಂಡುಕೊಂಡ ಪರಿಹಾರದ ಮಾರ್ಗವನ್ನು ಕಾಣಬಹುದಾಗಿದೆ.

**ಸಂಜೆ:** ಸಂಜೆ ಒಂದಿಷ್ಟು ಸಾಲುಗಳು ನೆನಪಿಗೆ ಬರುತ್ತವೆ. ಮತ್ತದೇ ಸಂಜೆ ಅದೇ ಏಕಾಂತದ ಅನುಭವವಾಗಿದೆ. ಅವಳು ಬರುವೆ ಎಂದು ಹೇಳಿರುವಳು. ಅವಳು ಹೇಳಿರುವ ಜಾಗದಲ್ಲಿ ಸರಿಯಾದ ಸಮಯಕ್ಕೆ ಕಾಯುತ್ತಿರುವೆ. ಗೆಜ್ಜೆ ಸಪ್ಪಳವಾದರೆ ಸಾಕು ಅವಳು ಬರುವಳು ಎಂದು ಕಾಯುತ್ತಿರುವೆ. ಮನಸ್ಸು ಹೇಳುತ್ತದೆ ಕೊಂಚ ತಾಳು ಬರುವಳು ಎಂಬ ಸಂದೇಶ ನೀಡುತ್ತಿದೆ. ಸಂಜೆಯ ತಿಳಿ ಕತ್ತಲಾಯಿತು ಒಂದು ಸಂದೇಶ ಬಂದಿತ್ತು. ಕ್ಷಮಿಸು ಗೆಳೆಯ ಬರಲು ಧೈರ್ಯವಿಲ್ಲ. ಭೇಟಿಯಾಗಲು ಆಗುತ್ತಿಲ್ಲ. ಪರಿಸ್ಥಿತಿ ಏನಾಗಿರಬೇಕೆಂದು ಕವಿ ವಿವರಿಸುವರು. ಮೌನವಿದ್ದಾಗ ಮನವು ಹೇಳಿತು, ಭೇಟಿ ಮಾಡುವುದು ಬೇಡ, ಬರುವುದು ಬೇಡ, ಒಂದೇ ವಿನಂತಿ ಎಲ್ಲವನ್ನು ಮರೆತಿದೆ. ಈ ಜಾಗಕ್ಕೆ ಬಂದಾಗ ನೆನಪುಗಳು ಬಂದವು. ಚಿಂತೆಗಳು ಶುರುವಾದವು. ನೆನಪುಗಳಿಂದ ಮರೆಯಲು ಮರೆಯಾಗಿಸಲು ಮತ್ತದೇ ಸಂಜೆ, ಅದೇ ಏಕಾಂತ ಎದುರಾಯಿತು. ಜೀವನ ಏನಾಯಿತು ಎಂಬ ಚಿಂತೆಗಳು ಕಾಡುತ್ತಿವೆ.

**ಸಮಯ:** ಕತ್ತಲು ಹೊತ್ತು ತರುವ ಕನಸುಗಳ ಖುಷಿಗೆ ಕಡಿವಾಣ ಹಾಕಬೇಕಾಗಿದೆ. ಕತ್ತಲಲ್ಲಿ ಕನಸಿನ ಖುಷಿ ಕೊಟ್ಟು, ಬೆಳಕ ಬದುಕಿನಲ್ಲಿ, ಬವಣೆಗಳ ಭಾರವನ್ನು ಬೆನ್ನಿಗೇರಿಸಿ, ಬದುಕಲೇಬೇಕೆಂಬ ಷರತ್ತನ್ನಿಟ್ಟು ಕ್ಷಣದ ಖುಷಿಯ ಕಸಿದುಕೊಳ್ಳುವ ಕನಸಿನ ಖುಷಿ ಬೇಡ ನನಗೆ. ಬೆಳಕೆ ಬೆಂಕಿಯಲ್ಲಿ ಬೆಂದರೂ, ಬದುಕಬಲ್ಲೆ ನಾ ನಗುವನ್ನೊತ್ತು"[9] ಹೀಗೆ ಕವಿ ರವಿಯೂ ಸಮಯದ ವಿಚಾರಗಳನ್ನು ತಿಳಿಸುತ್ತಾರೆ.

**ಕನಸುಗಳು ಆದರ್ಶಗಳು ಜವಾಬ್ದಾರಿಗಳು ಬದುಕಿನ ಪಯಣದಲ್ಲಿ ಇರುವವು:**

**ನಮ್ಮ ಆದರ್ಶ – ಎಸ್. ಜುಬೇರ್:** ಯೌವನಾವಸ್ಥೆಯಲ್ಲಿ ಕಲಿಕೆ ಜೀವನ ಪೂರೈಸುವ ಸುಸಮಯವಾಗಿದೆ. ನಮ್ಮ ಕಾಲೇಜಿನಲ್ಲಿ ಆದರ್ಶ ನಮಗೆ ಅಲ್ಲ. ಆನಂದದ ಸ್ಪರ್ಶ, ಕಲಿಕೆ, ಸ್ನೇಹಿತರು, ವಿವಿಧ ಚಟುವಟಿಕೆಗಳಿವೆ. ಪ್ರತಿದಿನವೂ ನಮ್ಮಲ್ಲಿ ತುಂಬಿರುವುದು ಹರ್ಷ. ಇದೇ ರೀತಿ ಸದಾ ಮುಂದುವರಿಯಲಿ ಪ್ರತಿವರ್ಷ ಎಂಬ ತಮ್ಮ ಬಯಕೆಯನ್ನು ಕವಿ ಎಸ್. ಜುಬೇರ್ ತಿಳಿಸುವರು. ಎಲ್ಲಿಂದಲೋ ಬಂದು ಇಲ್ಲಿ ಸೇರುವೆವು. ಎಲ್ಲೊ

ದೂರದಲಿ ಬಂದು ನಿಂತು ಜ್ಞಾನಸಂಪಾದನೆ, ವಿದ್ಯಾರ್ಜನ, ಸಂತಸ, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ಪ್ರವಾಸ ನಮ್ಮಲ್ಲಿರುವ ಪ್ರತಿಭೆಯನ್ನು ಹೊರಬರುವಂತಹ ವೇದಿಕೆಗಳು ನಮಗೆ ಧೈರ್ಯನ್ನು ತುಂಬಿವೆ. ಕಾಲೇಜಿನಲ್ಲಿ ಧೀರನಾಗಿ ಮೆರೆದು ಮುಂದೆ ಸಾಗುವುದಾಗಿದೆ. ವಿದ್ಯಾರ್ಥಿಗಳಿಗೆ ಆದರ್ಶ ಜ್ಯೋತಿಯಾಗಿ, ಜನಮನಗಳಲ್ಲಿ ಸ್ಫೂರ್ತಿಯಾಗಿ ಸೆಲೆಯ ನೆಲೆಯಾಗಿ ನೆಲೆಸುವುದಾಗಿದೆ. ಕಾಲೇಜು ಕಲಿಸುವ ಅನುಭವಗಳು ಜೀವನಕ್ಕೆ ಮಾರ್ಗದರ್ಶನವಾಗಿವೆ. ಅದಕ್ಕೆ ಸಲಹುತ್ತಿರುವ ಆದರ್ಶಮೂರ್ತಿಯಾಗಿ ದೇಶಕ್ಕೆ ಉತ್ತಮ ಪ್ರಜೆಯಾಗಿ ರೂಪಗೊಳ್ಳುವ ಕೇಂದ್ರವಾಗಿದೆ ಎಂದು ಕವಿ ತಿಳಿಸುತ್ತಾರೆ.

**ಕಾಲೇಜು:** ಕಾಲೇಜಿನ ನೆನಪುಗಳು ಸುಮಧುರ. ಕಾಲೇಜಿನ ವಿದ್ಯಾರ್ಥಿಯ ವಿದ್ಯಾಭ್ಯಾಸವು ಆ ಸಂದರ್ಭದಲ್ಲಿ ಸುಗಂಧ ಕಡಲ ಮಾರ್ಗದಲ್ಲಿ ಮಾಡುವ ಪ್ರವಾಸದ ಅನುಭವವಾಗಿದೆ. ಇದನ್ನು ದಾಟಲು ಬೇಕಾಗುವುದು ಹಲವು ಮಾಸಗಳು, ನಿಷ್ಠೆಯಿಂದ ಮಾಡುವುದು ಕಲಿಕೆಯ ಕೆಲಸವಾಗಿದೆ. ಬದುಕಿನಲ್ಲಿ ಎಡವಿ ತಪ್ಪಿದರೆ ಲಯದ ಪ್ರಾಸ ತಪ್ಪುತ್ತದೆ. ಇದನ್ನು ಅರಿತು ಎಚ್ಚರಿಕೆಯಿಂದ ನಡೆ. ಪ್ರತಿದಿವಸ ಇದನ್ನು ದಾಟಿದರೆ ನೀ ಸೇವಿಸುವೆ ಸಿಹಿಯಾದ ಪಾಯಸ. ಕಾಲೇಜು ಎಂಬುವುದು ಒಂದು ರಸದೂಟ, ಕಾಲು ಜಾರಿದರೆ ವಿಷದೂಟದ ಅನುಭವ. ಆಸೆ ಆಮಿಷಗಳ ಹೋರಾಟ. ಕ್ಲಾಸಲ್ಲಿ ಲೆಕ್ಚರರ ಪಾಠ, ಗೆಳೆಯರ ಎಳೆದಾಟ, ಶನಿಯ ದೃಷ್ಟಿ ಬಿದ್ದಂತೆ ಪರೀಕ್ಷೆಯ ಕಾಟ, ವಿವಿಧ ಪೀಕಲಾಟಗಳು ಇವೆ. ಆ ಪರೀಕ್ಷೆಯಲ್ಲಿ ಫೇಲಾದರೆ ಮನೆಯಲ್ಲಿ ಗೋಳಾಟ, ಪಾಸಾದರೆ ನೌಕರಿ ಹುಡುಕಲು ಅಲೆದಾಟ, ಎರಡು ಹೊತ್ತಿನ ಸಂಪಾದನೆಯ ಮರ್ಮಾಘಾತ. ಜೀವನದಲ್ಲಿ ಬಂದಂಗೆ ಸಾಗಿ, ಖುಷಿಯಾಗಿರಬೇಕು.

**ಕನಸುಗಳೇ – ಅನಿಲ್ ಕುಮಾರ:** ಎದೆಯ ಪರಿಮಿತಿಯ ನಿಮ್ಮ ಪರಿವಾರದೊಂದಿಗೆ ಆಕ್ರಮಿಸಲು ಬನ್ನಿ ಕನಸುಗಳೇ. ನಿರಾಶೆಯನ್ನು ಮನದಿಂದ ಹೊರದೂಡಿ, ಆಶಾವಾದವನ್ನು ಬರಮಾಡಿಕೊಂಡು ಆನಂದದಿಂದ ನಲಿದಾಡೋಣ ಬನ್ನಿ. ಭಾವನೆಗಳು ಬರಿದಾಗಿ ಜೀವನವು ನಿರಸವಾಗುವ ಮುನ್ನ ಬಂದುಬಿಡಿ. ಕನಸುಗಳೇ ಮನಸ್ಸಿಗೆ ನಿಗೂಢವಾದ ಸೀಮೆ, ನೀವು ಬೇಗ ಬನ್ನಿ, ಉಲ್ಲಾಸವ ತನ್ನಿ, ಸ್ಫೂರ್ತಿಯಾಗಿ ನೆಲೆಗೊಳ್ಳಿ ಎನ್ನುವ ಆಶಯವಿದೆ.

**ಪ್ರೇಮ:** ಹದಿಹರೆಯದ ವಯಸ್ಸಿನಲ್ಲಿ ಆಕರ್ಷಣೆಯೊಂದಿಗೆ ಮೊಳಕೆಯೊಡೆಯುವುದೇ ಈ ಪ್ರೇಮವಾಗಿದೆ. ಮನಸ್ಸಿನ ನಿಗೂಢತೆಯಲ್ಲಿ ಹೊಸ ತಿರುವನ್ನು ಪಡೆಯುತ್ತಿರುವ ನನ್ನಯ ಭಾವನೆಗಳ ಕಾವ್ಯದಲ್ಲಿ ಉದಯಿಸುವ ಉದಯೋನ್ಮುಖ ಮನೋಭಾವನೆಗಳ, ತರಂಗಗಳ ಛಾಯೆ, ಬಂಧನದ ಬೆಸುಗೆಯೇ ಈ ಪ್ರೇಮವಾಗಿದೆ.

**ಸಂಸಾರ:** ಈ ಬಾಳಿನ ಸಾಗರದಲ್ಲಿ ಆ ದೇವರು ಬರೆದ ಕಥೆಯಲ್ಲಿ ಯಾರಿಗೆ ಯಾರು ಶಾಶ್ವತವೋ ಎಲ್ಲಿಯವರೆಗೆ ಈ ಬಂಧದ ಸಂಸಾರ ಎಂಬುದು ಒಂದು ಕ್ರಿಕೆಟ್ ತಂಡದ ತರಹ, ಆದರೆ ನಮ್ಮ ಪಾತ್ರ ಅದರಲ್ಲಿ ಒಂದು ವಿಕೆಟಿನ ತರ"[10] ಹೀಗೆ ಸಂಸಾರವನ್ನು ಕ್ರಿಕೆಟ್‌ಗೆ ಹೋಲಿಸಿ ಕವಿ ರವಿಕುಮಾರ್ ಡಿ. ಅವರು ವಿವರಿಸಿದ್ದಾರೆ.

**ರುಚಿ:** ಪ್ರೀತಿಯನ್ನು ಸಂಪಾದಿಸಲು ಆಹಾರದ ರುಚಿಯಾದ ಊಟವೇ ಒಂದು ಮಾರ್ಗವಾಗಿದೆ. ಅಡುಗೆಮನೆಯಲ್ಲಿ ಅಡಗಿ ಕುಳಿತಿರುವ ರುಚಿಯೇ ನಿನ್ನಿಂದ ಆಗುವುದು ಘಮಘಮಿಸುವ, ಬಿಸಿಬಿಸಿಯ, ಹಸಿವನ್ನು ತಣಿಸುವ ತಿಂಡಿ. ಉಪ್ಪಿಗಿಂತ ರುಚಿಯಿಲ್ಲ ಎಂಬುದು ನಿನ್ನ ಗುಟ್ಟಿನ ನಿಜವಾದ ಸತ್ಯವಾಗಿದೆ. ಉಪ್ಪಿಲ್ಲದೆ ರುಚಿ ಬರಲು ಅಸಾಧ್ಯವಲ್ಲವೇ. ಉಪ್ಪಿನಕಾಯಿಯಲ್ಲಿ ನಿನ್ನ ಮಹತ್ವವೇ ಅಡಗಿದೆ. ಆ ಉಪ್ಪಿನಕಾಯಿ ಹೆಚ್ಚಾದಂತೆ ಅನಾರೋಗ್ಯವ ತಡೆಯುವುದು ಕಷ್ಟವೇ ಎಂದು ರುಚಿಯ ಸ್ವಾದವನ್ನು ಕವಿ ಸುರೇಶ್ ಆರ್. ಅವರು ವಿವರಿಸಿದ್ದಾರೆ.

ಒಟ್ಟಾರೆಯಾಗಿ ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯವು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಇತ್ತೀಚಿನ ಕಾವ್ಯಗಳು ಆಧುನಿಕತೆಯ ಹೊಸತನದ ಆವಿಷ್ಕಾರವನ್ನು ಪಡೆಯುತ್ತಾ ರಚನೆಗೊಂಡಿವೆ. ಕವಿ, ಕಾವ್ಯ, ಸಹೃದಯ ಮನಸ್ಸಿನಲ್ಲಿರುವ ಭಾವನೆಗಳು ಅಭಿವ್ಯಕ್ತಗೊಳಿಸಿಕೊಂಡು ಅರ್ಥವನ್ನು ತಿಳಿಯುವುದಾಗಿದೆ. ಸಮಯ, ಕನಸುಗಳು, ಬದುಕು, ಪ್ರೇಮ, ಸಂಬಂಧ, ವಾಸ್ತವತೆ, ಸಮಾನತೆ, ಆದರ್ಶಗಳು, ಅವಕಾಶ, ಮಾತು, ದಾರಿದೀಪ ಹೀಗೆ ಹಲವಾರು ವಿವಿಧ ಆಯಾಮಗಳಿಂದ ವೈವಿಧ್ಯತೆಯ ನೆಲೆಗಳನ್ನು ಅಧ್ಯಯನಗಳಿಂದ ಅರಿಯಬಹುದಾಗಿದೆ.

**ಕೊನೆಟಿಪ್ಪಣಿಗಳು**

1. ಭೇರ್ಯ ರಾಮಕುಮಾರ. *ವಿಶ್ವಕವಿ ಕುವೆಂಪು.* ಪುಟ.114
2. ಶೇಖ್ ಎಮ್.ಕೆ. (ಮೌ.ಕು.ಶೇ). *ಭೂಮಾತೆ ನನ್ನ ಮಾತೆ.* ಪುಟ.18
3. ಶಾಂತ ಕುಂಟಿನಿ (ಶಕುಂತಲಾ). *ಸೂಕ್ಷ್ಮದೃಷ್ಟಿ.* ಪುಟ.23
4. ಮಲ್ಲಿಕಾರ್ಜುನ, ಎನ್. ಗುಮಗೋಳ. *ಭಾಷೆ ಮತ್ತು ಕಾವ್ಯಮೀಮಾಂಸೆ.* ಪುಟ.99
5. ಶ್ರೀಶೈಲ ಮಲ್ಲನಗೌಡ ಬಿರಾದಾರ. *ಕಾವ್ಯ ಶರಧಿ.* ಪುಟ.9
6. ಚಿದಾನಂದ, ಕೆ.ಎಸ್. *ಒಲವಿನ ಅಲೆಗಳು.* ಪುಟ.40
7. ಚಂದ್ರಮಾ ಎಸ್. ಕಣಗಲಿ. *ಭಾವಾಂಜಲಿ.* ಪುಟ.23
8. ಸುರೇಶ ನಾವಿ. *ಬುದ್ಧ ನಗಲಾರ.* ಪುಟ.17
9. ಶಿವರಾಜ್ ಮೋತಿ. (ಸಂ.). *ರವಿಯ ಕವಿತೆಗಳು.* ಪುಟ.8
10. ನೀಲಕಠೇಗೌಡ, ಹೊ.ವ. (ಪ್ರ.ಸಂ.). *ನಾವೂ ಜೊತೆ ಜೊತೆಯಲ್ಲಿ.* ಪುಟ. 26

**ಪರಾಮರ್ಶನ ಗ್ರಂಥಗಳು:**


- ಚಂದ್ರಮಾ ಎಸ್. ಕಣಗಲಿ. (2014). *ಭಾವಾಂಜಲಿ.* ಪ್ರಕಾಶಕರು– ಚಂದ್ರಸೇನ್ ಎ. ರಾವ್.
- ಚಿದಾನಂದ, ಎ.ಎಸ್. (2013). *ಒಲವಿನ ಅಲೆಗಳು.* ಕವಿತಾ ಪ್ರಕಾಶನ.
- ಮಲ್ಲಿಕಾರ್ಜುನ ಎನ್. ಗುಮಗೋಳ. (2009). *ಭಾಷೆ ಮತ್ತು ಕಾವ್ಯ ಮೀಮಾಂಸೆ.* ವಿದ್ಯಾನಿಧಿ, ಪ್ರಕಾಶನ.
- ನೀಲಕಂಠೇಗೌಡ, ಹೊ.ನ. (ಪ್ರ.ಸಂ.) (2010). ನಾವೂ ಜೊತೆ ಜೊತೆಯಲಿ. ಕನ್ನಡ ಸಂಘ.
- ಶ್ರೀಶೈಲ ಮಲ್ಲನಗೌಡ ಬಿರಾದಾರ. (2017). *ಕಾವ್ಯ ಶರಧಿ.* ನೇಗಿಲಯೋಗಿ ಪ್ರಕಾಶನ.
- ಶೇಖ್ ಎಮ್. ಕೆ. (ಮೌ.ಕು.ಶೇ.) (2018). ಭೂಮಾತೆ ನನ್ನ ಮಾತೆ. ಭೂಮಾತಾ ಪ್ರಕಾಶನ.
- ಶಾಂತಾ ಕುಂಟಿನಿ (ಶಕುಂತಲಾ). (2018). ಸೂಕ್ಷ್ಮ ದೃಷ್ಟಿ. ಪುತ್ತೂರು ಸಾಹಿತ್ಯ ವೇದಿಕೆ.
- ಶಿವರಾಜ್ ಮೋತಿ. (ಸಂ.) (2021). ರವಿಯ ಕವಿತೆಗಳು. ಸಮೀರ ಪ್ರಕಾಶನ.
- ಸುರೇಶ ನಾವಿ. (2017). *ಬುದ್ಧ ನಗಲಾರ.* ನಾವಿ ಪ್ರಕಾಶನ.